## ಕಂಡನಾ ಹುಲಿರಾಯ

ಕಲೀಮ್ ಉಲ್ಲಾ ಅವರು ಫೆ. 4ರ ಸಂಚಿಕೆಯಲ್ಲಿ ಬರೆದಿರುವ 'ಹುಲಿ ಹುಡುಕುತ್ತ ಕಾಡಿನ ಭಾಷೆಯ ಗುಂಗಿನಲ್ಲಿ' ಲೇಖನ ತುಂಬಾ ಚೆನ್ನಾಗಿದೆ. ಲೇಖಕರು ಓದುಗರನ್ನು ಜಿಮ್ ಕಾರ್ಬೆಟ್ ವನ್ಯಧಾಮಕ್ಕೆ ಪ್ರತ್ಯಕ್ಷವಾಗಿ ಕರೆದೊಯ್ದಿದ್ದಾರೆ.

—ರಮೇಶ್ ಎಸ್.

ಪ್ರಬಂಧ ನಾವೇ ಹುಲಿ ಬೇಟೆಗೆ ಹೊಂಚು ಹಾಕುತ್ತಿದ್ದೇವೇನೋ ಎನಿಸುವಷ್ಟು ರೋಚಕವಾಗಿ ಮೂಡಿ ಬಂದಿದೆ. ಕಗ್ಗಾಡಿನ ಭಾಷೆಗೆ ಫೋಟೊಗಳು ಮೆರಗು ನೀಡಿವೆ.

—ಎಂ. ಸಂಜೀವ, ಕಲಬುರಗಿ



## ಉತ್ತಮ ಕಥೆ

ಫೆ. 4ರ ಸಂಚಿಕೆಯಲ್ಲಿ ಅನು ಬೆಳ್ಳೆ ಬರೆದಿರುವ 'ಈ ಮಣ್ಣು ನಮ್ಮದು' ಕಥೆ ಚೆನ್ನಾಗಿತ್ತು. ಕೊನೆಗೆ ಯಾವುದೂ ಪರಿಹಾರ ಸಿಗದಿರುವುದಕ್ಕೆ ವಿಷಾದವಾಯಿತು.

—ಬಿ. ಎಸ್. ಮುಳ್ಳೂರ, ಹಲಗತ್ತಿ

'ಈ ಮಣ್ಣು ನಮ್ಮದು' ಬಹಳ ಸುಂದರವಾದ, ಅರ್ಥಪೂರ್ಣವಾದ ಕಥೆ. ಮಣ್ಣು, ಹೊನ್ನು, ಹೆಣ್ಣುಗಳ ಬಗ್ಗೆ ಅತೀ ಆಸೆ ನಮ್ಮ ಅಧಃಪತನಕ್ಕೆ ದಾರಿ ಎನ್ನುವ ಸತ್ಯ ಸಾರಾಂಶವನ್ನು ಬಿಂಬಿಸುವ ಅರ್ಥಗರ್ಭಿತವಾದ ಕಥೆ.

—ಉಮೇಶ್ ಕೂರಾಡಿ, ಉಡುಪಿ

ಕಥೆಯಲ್ಲಿ ಬರುವ ಪಾತ್ರಗಳು, ಮಣ್ಣಿನ ವ್ಯಾಮೋಹ, ವ್ಯಾಮೋಹದ ಎದುರು ಮರೆತು ಹೋಗುವ ಮನುಷ್ಯ ಹಾಗೂ ರಕ್ತ ಸಂಬಂಧಗಳ ಬಗ್ಗೆ ಅತ್ಯುತ್ತಮವಾಗಿ ತಿಳಿಸುತ್ತದೆ.

—ವಿನಾಯಕ ಜೋಗ್, ಹಾವೇರಿ

## ಮಾನವೀಯತೆಯ ಕೊರತೆಗೆ ಕನ್ನಡಿ

ಜ. 28ರ ಸಂಚಿಕೆಯ 'ನಿಮ್ಮೊಡನೆ' ಪುಟದಲ್ಲಿ ರಘುನಾಥ ಚ. ಹ. ಬರೆದಿರುವ 'ಸಾರ್ವಜನಿಕ ಜೀವನದಲ್ಲಿ ಮಾನವೀಯತೆಗೆ ಕೊರತೆಯೇ?' ಲೇಖನ ಚೆನ್ನಾಗಿದೆ. ಈ ದುರ್ವರ್ತನೆ ಬಹಳ ಕಾಲದಿಂದ ನಡೆದಿದೆ. ಹಾಗೆಂದು ಎಲ್ಲ ಚಾಲಕ / ನಿರ್ವಾಹಕರು ಬ್ಯಾಂಕ್/ಅಂಚೆ ಕಚೇರಿ/ ಪೊಲೀಸ್ ನೌಕರರು ಈ ರೀತಿ ನಡೆದುಕೊಳ್ಳುವುದಿಲ್ಲ. ಯಾರೇ ಹೀಗೆ ನಡೆದುಕೊಂಡರೂ ಅವರಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡಿದರೆ ಸರಿಯಾಗಬಹುದು.

—ಆರ್. ಹಳ್ಳೂರ್, ಬೆಂಗಳೂರು

## ಸ್ಫೂರ್ತಿಕಥನ

ಜ. 28ರ ಸಂಚಿಕೆಯಲ್ಲಿ ಸ್ಫೂರ್ತಿ ಕಥನ ಪುಟದಲ್ಲಿ ಶಶಿಕುಮಾರ್ ಸಿ. ಅವರು ನಿರೂಪಿಸಿದ ಎಸ್.ಆರ್. ನಾರಾಯಣ ಕುರಿತ ಪರಿಚಯ ಲೇಖನವನ್ನು ನಾನು ಪೂರ್ತಿ ಓದಿದೆ. ಅಲ್ಲಿರುವ ನಂಬರ್ ಉಪಯೋಗಿಸಿ ನಾರಾಯಣ ಅವರೊಂದಿಗೆ ಮಾತಾಡಿದೆ. ನಾನು ಸ್ವಲ್ಪ ಪುಸ್ತಕಗಳ ಸಂಗ್ರಹವನ್ನು ಹೊಂದಿದ್ದು, ಅವರು ಯಾವುದೇ ಕಾರ್ಯನಿಮಿತ್ತ ಬೆಂಗಳೂರಿಗೆ ಬಂದಾಗ ಅವರನ್ನು ಸಂಪರ್ಕಿಸಿ, ಸ್ವಲ್ಪ ಪುಸ್ತಕಗಳನ್ನು ನೀಡುತ್ತೇನೆ.

—ಎನ್. ಗೋಪಾಲರ್, ಬೆಂಗಳೂರು

## ಕೊರತೆ ಮೀರಿದ ಧೀರರು

ರವೀಂದ್ರ ಭಟ್ಟ ಅವರು ಫೆ. 4ರ ಸಂಚಿಕೆಯಲ್ಲಿ ಬರೆದಿರುವ 'ಕೊರತೆ ಮೀರಿದ ಧೀರರು' ಎಂಬ ಲೇಖನ ಅತ್ಯುತ್ತಮವಾಗಿತ್ತು. ಮಾತೆಯರ ಪ್ರಯತ್ನದಿಂದಾಗಿ ಶ್ರವಣದೋಷವನ್ನು ಮೀರಿ ಮಾತು ಕಲಿತು ಸಾಮಾನ್ಯ ಮಕ್ಕಳಂತೆ ಬದುಕಿದ ಮಕ್ಕಳ ಛಲವನ್ನು ಈ ಲೇಖನ ಎತ್ತಿ ತೋರಿಸಿದೆ.

—ಅಶೋಕ ಪ. ಹೊನಕೇರಿ, ಧಾರವಾಡ



ಈ ಬಾರಿ ಗಮನ ಸೆಳೆದ ಲೇಖನ 'ಕೊರತೆ ಮೀರಿದ ಧೀರರು'. ಮಹಾಮಾತೆಯರ ಸಾಹಸವನ್ನು ಲೇಖಕರು ಮನಮುಟ್ಟುವಂತೆ ವಿವರಿಸಿದ್ದಾರೆ. ಕನ್ನಡ ಚಿತ್ರರಂಗದ ಮಹಾನ್ ನಟ ದಿವಂಗತ ಬಾಲಕೃಷ್ಣ ಅವರಿಗೆ ಶ್ರವಣಶಕ್ತಿ ಇರಲಿಲ್ಲ. ಈ ವಿಷಯ ನಮ್ಮ ತಾಯಿ ಹೇಳುವ ತನಕ ನನಗೆ ಗೊತ್ತಿರಲಿಲ್ಲ. ಬಾಲಕೃಷ್ಣ ಅವರು ನಮ್ಮ ಅಮ್ಮನ ಅಣ್ಣನ ಜತೆಗೆ ನಾಟಕಗಳಲ್ಲಿ ನಟಿಸುತ್ತಿದ್ದರು. ಎಲ್ಲವನ್ನು ನೆನಪು ಮಾಡಿದ 'ಸುಧಾ'ಳಿಗೆ ಧನ್ಯವಾದ.

—ಕಮಲಾದೇವಿ ಆರ್ ಹಳ್ಳೂರ್, ಬೆಂಗಳೂರು

ಮುಖಪುಟ ಲೇಖನವು ಅಂಗವೈಕಲ್ಯ ಇಲ್ಲದ, ಆದರೆ ಕಿವಿಗಳಿದ್ದೂ ಕಿವುಡ, ಬಾಯಿ ಇದ್ದೂ ಮೂಗ, ಕಣ್ಣುಗಳಿದ್ದೂ ಕುರುಡ ರೀತಿಯಲ್ಲಿ ವರ್ತಿಸುವವರಿಗೆ ಆಳವಾಗಿ ಚಿಂತನೆ ನಡೆಸಲು ಇಂಧನವಾಗಿದೆ.

—ಎಡ್ವರ್ಡ್ ರೊಡ್ರಿಗಸ್ ಎಸ್. ಜೆ., ಬೆಂಗಳೂರು

ಅಂಗವಿಕಲ ಮಕ್ಕಳ ಸಾಧನೆಯನ್ನು ಓದಿ ನಿಜಕ್ಕೂ ಸಂತೋಷವಾಯ್ತು. ಇನ್ನಷ್ಟು ಸಾಧಕರನ್ನು ಪರಿಚಯಿಸಿದ್ದರೆ ಬರಹ ಮತ್ತೂ ಹೆಚ್ಚು ಅರ್ಥಪೂರ್ಣವಾಗುತ್ತಿತ್ತು. ಕಿವುಡ ಮಕ್ಕಳು ಉದ್ಯೋಗದ ಸ್ಥಳಗಳಲ್ಲಿ ಸಾಕಷ್ಟು ಅವಮಾನಗಳನ್ನು ಎದುರಿಸುತ್ತಾರೆ. ಅವರಿಗೆ ಬೇಕಾಗಿರುವುದು ಅನುಕಂಪವಲ್ಲ, ಬೆಂಬಲ. ಈ ಲೇಖನ ಆ ಕೆಲಸವನ್ನು ಮಾಡಿದೆ.

—ಡಾ. ಶಬ್ನಮ್ ಎಸ್. ದಾವಣಗೆರೆ

ಫೆ 4ರ 'ಸುಧಾ' ಸಮಾಜಕ್ಕೆ ಮುಖ್ಯವಾದ ವ್ಯಾಕ್ಸಿನ್ ಪರಿಚಯಿಸಿದೆ. ಅಂಗವಿಕಲರ ಬಗ್ಗೆ ಇರುವ ಧೋರಣೆ ಹಾಗೂ ಅವುಗಳನ್ನು ಮೆಟ್ಟಿನಿಂತ ಪ್ರತಿಭೆಗಳ ಸಾಧನೆಯ ಸಂಕ್ಷಿಪ್ತ ಪರಿಚಯ, ಪತ್ರಿಕೆಯ ಘನತೆಯನ್ನು ಹೆಚ್ಚಿಸಿದೆ.

—ವಿದ್ಯಾ ಶೆಣೈ ಕುಂದಾಪುರ
ಕೆ. ಎಸ್. ಸವಿತ ಬೆಂಗಳೂರು

ಇಡೀ ಲೇಖನದ ಬಗೆಗೆ ಎಷ್ಟು ಹೇಳಿದರೂ ಕಡಿಮೆ. ಇಲ್ಲಿ ಪರಿಚಯಿಸಿದವರಂತೆ ಹಲವಾರು ಮಂದಿ ಎಲೆಮರೆಯ ಕಾಯಿಯಂತಿರುವ ಸಾಧಕರು, ಎಲ್ಲರಿಗೂ ಮಾದರಿ ಮತ್ತು ಸ್ಫೂರ್ತಿ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ವಿಚಾರ ಲಹರಿ

ಜ. 28ರ ಸಂಚಿಕೆಯಲ್ಲಿ ಅಮೃತಮತಿ ಬರೆದಿರುವ 'ಸಂಕಮ್ಮನ ಸಾಲು' ಲೇಖನದಲ್ಲಿ ಎರಡು ತಪ್ಪುಗಳಿವೆ. 'ಕಂಸಾಳೆಯ ಮೂಲಕ ನಿರ್ವಹಿಸಲ್ಪಡುವ ಮಾದೇಶ್ವರನ ಕಾವ್ಯ ಮತ್ತು ನೀಲಗಾರರ ಮೂಲಕ ನಿರ್ವಹಿಸಲ್ಪಡುವ ಮಂಟೇಸ್ವಾಮಿ ಕಾವ್ಯವನ್ನು ಜನರ ಮಧ್ಯೆ ಆದಿಯಿಂದಲೂ ಜೀವಂತವಾಗಿ ಇರಿಕೊಂಡು ಬಂದವರು ಆದಿ ಕರ್ನಾಟಕ ವಂಶಸ್ಥರು' ಎಂದಿದೆ. ಈ ಜನಪದ ಮಹಾಕಾವ್ಯಗಳನ್ನು ಆದಿ ಕರ್ನಾಟಕ ಸಮುದಾಯದವರು ಮಾತ್ರವಲ್ಲ, ಉಪ್ಪಾರ, ಕುರುಬರು, ನಾಯಕರೂ ಹಾಡುತ್ತಾರೆ. ಎರಡನೆಯದಾಗಿ 'ಶಂಕಮ್ಮನ ಸಾಲು' ಎಂದು ಲೇಖಕರು ಬರೆದಿದ್ದಾರೆ. ಅದು ಸಂಕಮ್ಮನ ಸಾಲು ಎಂದಿರಬೇಕು.

—ಹೊರೆಯಾಲ ದೊರೆಸ್ವಾಮಿ, ಮೈಸೂರು

## ಕಾನೂನು ಕಣ್ಣು

ಫೆ. 4ರ ಸಂಚಿಕೆಯ 'ಕಾನೂನು ಕಣ್ಣು' ಅಂಕಣದಲ್ಲಿ ನ್ಯಾಯವಾದಿ ಸೌಮ್ಯಲಕ್ಷ್ಮೀ ಕುಕ್ಕಜೆ ಅವರು 'ಮದುವೆಯಾಚೆಯ ಸಂಸಾರ'ದ ಬಗ್ಗೆ ಸೂಕ್ಷ್ಮವಾಗಿ ಬರೆದಿದ್ದಾರೆ.

—ಲಕ್ಷ್ಮಣ್ ರಾವ್ ಎಂ.ಎಲ್., ದಾವಣಗೆರೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in